ಶ್ರೀ ಪಿ.ಎಂ. ಭಾಂಗಿ.—ಸ್ವಾಮಿ, ನನ್ನ (ಈ) ಪ್ರಶ್ನೆಗೆ ನದರಿ ಗೃಹಗಳನ್ನು ಹೊಂದಲು ಯಾರೂ ಅರ್ಜಿಯನ್ನು ಸಲ್ಲಿಸದಿರುವುದು ನಿಜವೇ ಎಂದು ಕೇಳಿರುವುದಕ್ಕೆ ತಾವು ಇಲ್ಲ ಎಂದು ಉತ್ತರ ಕೊಟ್ಟಿದ್ದೀರಿ. ಮನೆಗಳಿಗಾಗಿ ಇದುವರೆಗೆ ಎಷ್ಟು ಅಪ್ಲಿಕೇಷನ್‌ಗಳು ಬಂದಿತು, ಮತ್ತು ಆಲ್ಲ ಮನೆಗಳು ಖಾಲಿಯಾಗಿರುವುದಕ್ಕೆ ಕಾರಣ ಏನು ಎಂಬುದನ್ನು ತಿಳಿಸುತ್ತೀರಾ?

† ಶ್ರೀ ಆರ್. ಗುಂಡೂರಾವ್.—ಸಾರ್ವಜನಿಕರಿಂದ ಸಾಕಷ್ಟು ಬೇಡಿಕೆಗಳು ಬರಲಿ. ಅದ ಕ್ಕೋಸ್ಕರ ಮನೆಗಳನ್ನು ಖಾಲಿ ಇಡಬೇಕಾಯಿತು.

ಶ್ರೀ ಪಿ.ಎಂ. ಭಾಂಗಿ.—ಫಾರೆಸ್ಟ್ ಏರಿಯಾದಲ್ಲಿ ಮನೆಗಳನ್ನು ಕಟ್ಟಿದರೆ ಯಾರೂ ಬರುವು ದಿಲ್ಲ. ಆದ್ದರಿಂದ ದಯವಾಡಿ ಆರ್ಟ್ಸ್ ಅಂಡ್ ಸೈನ್ಸ್ ಕಾಲೇಜಿನ ಬಳಿ ರಸ್ತೆಯ ಪಕ್ಕದಲ್ಲಿ ಕಟ್ಟಿಸಿರುವ ಆ ಮನೆಗಳನ್ನು ಆ ಕಾಲೇಜಿನವರಿಗೆ ರೆಂಟಲ್ ಬೇಸಿಸ್ ಮೇಲೆ ಕೊಡುವುದಕ್ಕೆ ಅಡ್ವೈಸ್ ಮಾಡುತ್ತೀರಾ?

ಶ್ರೀ ಆರ್. ಗುಂಡೂರಾವ್.—ಸಾರ್ವಜನಿಕರ ಬೇಡಿಕೆಗಳು ಎಲ್ಲವೆ ಆಲ್ಲಿ ಮನೆಗಳನ್ನು ಕಟ್ಟಬೇಕು ಎಂದು ಗೃಹನಿರ್ಮಾಣ ಮಂಡಲಿಗೆ ಸರ್ಕಾರ ಆದೇಶ ಕೊಟ್ಟಿದೆ. ಈಗ ಆರ್ಟ್ಸ್ ಅಂಡ್ ಸೈನ್ಸ್ ಕಾಲೇಜಿನ ಪ್ರಿನ್ಸಿಪಾಲರು ಆ ಮನೆಗಳು ನಮಗೆ ಬೇಕು ಎಂದು ಬರೆದಿದ್ದಾರೆ, ಯಾವರೀತಿ ವ್ಯವಹಾರ ಮಾಡಬೇಕೋ ಆ ರೀತಿ ಮಾಡಿ ಸರ್ಕಾರ ಅದನ್ನು ಪರಿಶೀಲನೆ ಮಾಡುತ್ತದೆ.

ಶ್ರೀ ಜೆ.ಎಲ್. ಕಬಾಡೆ.—ಸ್ವಾಮಿ ಈ ಮನೆಗಳನ್ನು ಕಟ್ಟಿದ್ದು ಷರು ಮಾಡಿದ್ದು ಯಾವಾಗ? ಪೂರ್ತಿಯಾದದ್ದು ಯಾವಾಗ? ಮನೆಗಳನ್ನು ಕಟ್ಟುವ ಕಾಲಕ್ಕೆ ಎಸ್ಟಿಮೇಟ್ ಎಷ್ಟಿತ್ತು, ಪೂರ್ತಿ ಯಾದಾಗ ಎಷ್ಟು ಖರ್ಚಾಗಿದೆ?

ಶ್ರೀ ಆರ್. ಗುಂಡೂರಾವ್ —ಮನೆಗಳನ್ನು ಕಟ್ಟುವುದಕ್ಕೆ ಪ್ರಾರಂಭ ಮಾಡಿದಾಗ ಅದರ ಎಸ್ಟಿಮೇಟ್ 2,10,000 ರೂಪಾಯಿ ಆಗಿತ್ತು. ಪೂರ್ತಿಯಾದಾಗ ಒಟ್ಟು 3,14,000 ರೂಪಾಯಿ ಖರ್ಚಾಗಿದೆ.

ಶ್ರೀ ಜೆ.ಎಲ್.—ಈ ಗೃಹಗಳಿಗೆ ಹೆಚ್ಚಿನ ಬೆಲೆ ಇರುವುದರಿಂದ ಈ ಬಗ್ಗೆ ಬೇಡಿಕೆಗಳು ಬಂದಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಆರ್. ಗುಂಡೂರಾವ್ — ಬೇಡಿಕೆ ಬಂದಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆ. ಅದಕ್ಕೋಸ್ಕರ ಸಾರ್ವಜನಿಕರ ಬೇಡಿಕೆಗಳು ಎಲ್ಲೆಲ್ಲ ಇವೆ ಅಂತಹ ಕಡೆಗಳಲ್ಲಿ ಮನೆಗಳನ್ನು ಕಟ್ಟ ಬೇಕೆಂದು ಹೌಸಿಂಗ್ ಬೋರ್ಡಿಗೆ ಸರ್ಕಾರ ಆದೇಶ ಕೊಟ್ಟಿದೆ.

Supply of Pure Water to Bijapur Citizens.

553. SRI J. L. KABADE (Baloli).—Will the Minister for Municipal Administration and Political Pensions be pleased to state:—

(a) whether it has come to the notice of the Government that pure water has not been suplied to Bijapur City;

(b) whether it has come to the notice of the Government that the contaminated water with insects has been supplied to the citizens who were in troubles due to scarcity of pure water;

(c) whether it is a fact that had Cholera had spread in the City and some persons died due to drinking the contaminated water with insects;

(d) whether Government propose to take any action to remove the scarcity of drinking water and to supply pure water to safeguard the health of the citizens?

SRI D. K. NAIKAR (Minister for Municipal Administration and Political Pensions).—

(a) The pure water is being supplied to Bijapur City.

(b) The water is chemically tested by the Municipality and its purity is ensured and the contaminated water is not supplied.

(c) The spread of Cholera is not on account of water supply made through water supply scheme, Bijapur.

(d) The City Municipality is supplying pure water to Bijapur city. There is no scarcity of drinking water at present. Suitable action will be taken if searcity occurs.

ಶ್ರೀ ಜೆ.ಎಲ್. ಕಬಾಡೆ.—ವಿಜಾಪುರ ನಗದರಲ್ಲಿ ನಗರ ಸಭೆಯವರು ನೀರನ್ನು ರಾಸಾಯನಿಕ ಪರೀಕ್ಷೆಗೆ ಗುರಿಪಡಿಸಿದ್ದು ಯಾವಾಗ ಮತ್ತು ಯಾವ ತಾರೀಖಿಗೆ ನೀರಿನ ಶುದ್ಧತೆಯನ್ನು ಖಾತರಿ ಪಡಿಸಿಕೊಂಡಿದ್ದಾರೆ?

†ಶ್ರೀ ಡಿ.ಕೆ. ನಾಯ್ಕರ್.—ಯಾವ ತಾರೀಖಿಗೆ ಖಾತ್ರಿಪಡಿಸಿಕೊಂಡಿದ್ದಾರೆ ಎಂಬ ಬಗ್ಗೆ ನನ್ನ ಹತ್ತಿರ ಮಾಹಿತಿ ಇಲ್ಲ. ಆದರೆ ಖಾತ್ರಿ ಪಡಿಸಿಕೊಂಡಿದ್ದಾರೆ ಎಂಬ ಬಗ್ಗೆ ಮಾಹಿತಿ ಇದೆ.

ಶ್ರೀ ಜೆ. ಎಲ್. ಕಬಾಡೆ.—ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ನೀರನ್ನು ನಗರ ಸಭೆಯವರು ರಾಸಾಯನಿಕ ಪರೀಕ್ಷೆಗೆ ಗುರಿಪಡಿಸಿದ್ದು ಇದರ ಶುದ್ಧತೆಯನ್ನು ಖಾತ್ರಿಪಡಿಸಿ ಕೊಂಡಿದ್ದಾರೆ. ಕೊಳೆತ ನೀರನ್ನು ಕೊಟ್ಟಿರುವುದಿಲ್ಲ ಎಂದು ಹೇಳಿದ್ದಾರೆ. ಆದ್ದರಿಂದ ನಾನು ಕೇಳುವುದು ಯಾವಾಗ ನೀರನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಲಾಯಿತು ಎಂದು. ಮಾನ್ಯ ಮಂತ್ರಿಗಳು ಯಾವಾಗ ರಾಸಾಯನಿಕ ಪರೀಕ್ಷೆಗೆ ಒಳಪಡಿಸಿ ಖಾತ್ರಿಪಡಿಸಿಕೊಳ್ಳಲಾಯಿತು ಎಂಬ ಬಗ್ಗೆ ತಮ್ಮ ಹತ್ತಿರ ಮಾಹಿತಿ ಇಲ್ಲ ಎಂದು ಹೇಳಿದರೆ ಪೂರ್ತಿಯಾದ ಉತ್ತರವನ್ನು ಜವಾಬ್ದಾರಿಯಿಂದ ಕೊಡುತ್ತಿದ್ದಾರೆಯೇ ಎಂದು ಪ್ರಶ್ನೆ ಮಾಡಬೇಕಾಗಿದೆ.

ಶ್ರೀ ಡಿ.ಕೆ. ನಾಯ್ಕರ್.—ನೀರನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿದ್ದು ಪರಿಶೀಲನೆ ಮಾಡಿ ನೀರಿನ ಶುದ್ಧತೆಯನ್ನು ಖಾತ್ರಿಪಡಿಸಿಕೊಂಡ ಬಗ್ಗೆ ನನ್ನ ಹತ್ತಿರ ಮಾಹಿತಿ ಇದೆ. ಜವಾಬ್ದಾರಿಯಿಂದ ಉತ್ತರ ಕೊಡುತ್ತಿಲ್ಲ ಎಂದು ಹೇಳುವುದು ಸರಿಯಲ್ಲ.

ಶ್ರೀ ಜೆ ಎಲ್. ಕಬಾಡೆ —ಹಾಗಾದರೆ ಈ ಪ್ರಶ್ನೆಯನ್ನು ವಿಥೆರ್ಡ್ ಮಾಡಿ ಪೂರ್ತಿ ಪ್ರಶ್ನೆಗೆ ಸರಿಯಾದ ಉತ್ತರವನ್ನು ತರಿಸಿಕೊಡಿ. ಜನಾರೋಗ್ಯ ದೃಷ್ಟಿಯಿಂದ ನಾನು ಈ ಪ್ರಶ್ನೆಯನ್ನು ಕಳುಹಿಸಿದ್ದೇನೆ. ಖಾಲರಾ ಮುಂತಾದ ಖಾಯಿಲೆಗಳು ಹರಡಿರುವ ವದಂತಿಗಳಿರುವುದರಿಂದ ಈ ಪ್ರಶ್ನೆಯನ್ನು ಕಳುಹಿಸಿದ್ದೇವೆ. ಇದಕ್ಕೆ ತಾವು ನಿರಾಧಾರವಾಗಿ ಉತ್ತರವನ್ನು ಕೊಟ್ಟಿದ್ದೀರಿ. ಪೂರ್ತಿಯಾದ ಉತ್ತರ ತರಿಸಿಕೊಡುವುದಾದರೆ ತರಿಸಿಕೊಡುತ್ತೇನೆ ಎಂದು ಹೇಳಿ, ಇಲ್ಲದಿದ್ದರೆ ಈ ಪ್ರಶ್ನೆಯನ್ನು ತಡೆಹಿಡಿಯಿರಿ.

ಶ್ರೀ ಡಿ.ಕೆ. ನಾಯ್ಕರ್ —ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಪ್ರಶ್ನೆ ಕೇಳುವಾಗ ನೀರು ಮುಲನವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಾರೆ. ಆದಕ್ಕೆ ನಾವು ಇಲ್ಲ ಎಂದು ಉತ್ತರ ಕೊಟ್ಟಿದ್ದೇವೆ.

MADAM SPEAKER.—Now held on Question No. 128 by Sri Sayanak.

Death due to tubectomy operation

128. SRI B. B. SAYANAK (Belgaum).—Will the Minister for Health be pleased to state :—

(*a*) whether it is a fact that one lady by name Smt. Laxmi Gundu Rao Pattar (Karekar) of Bidi in Khanapur taluk was admitted on 14th July 1974 at Kakeri Primary Health Centre, for tubectomy operation ;

(*b*) whether the tubectomy operation was performed on 15th July 1974 ;

(*c*) whether it is a fact that she died on 24th July 1974 in Belgaum Civil Hospital;

(*d*) if so, the reason for the death and whether any compensation has been paid to her relatives ?

SRI H. M. CHANNABASAPPA (Minister for Health).—(*a*) Smt Laxmi Gundu Rao Karekar was admitted for tubectomy operation on 14th July 1974 at Kakkeri Primary Health Centre, Belgaum District.

(*b*) Yes.

(*c*) Yes.

(*d*) The cause of death was cerebral venous thrombosis which is one of the known complication after delivery. The compensation has not been paid as yet. Application from the husband of the deceased has been obtained and is under consideration.

SR B. B. SAYANAK.—Supplementary to (d) : May I know when this lady delivered and where ?

† SRI H. M. CHANNABASAPPA.—She delivered on 6-7-1974 in her house.

SRI B. B. SAYANAK.—After the delivery within how many days this tubectomy operation takes place ?

SRI H. M. CHANNABASAPPA.—Tubectomy operation can be done at any time after the delivery perferably within 10 days.

SRI B. B. SAYANAK.—The operation took place on 14th July 1974. Why after so much time the husband of the deceased who is entitled to get a compensation of Rs. 5,000 has not been paid compensation so far ?